# ಸಾಮಿ ಶರಣು!

ಅಡ್ನಾನ್ ಸಾಮಿ ಮತ್ತೆ ಸುದ್ದಿಯಲ್ಲಿದ್ದಾನೆ. ಕಳೆದ ಹಲವಾರು ವರ್ಷಗಳಿಂದ ಭಾರತದ ಪೌರತ್ವ ಪಡೆಯಲು ಪ್ರಯತ್ನಿಸುತ್ತಿರುವ ಆತನಿಗೆ ಈ ನಿಟ್ಟಿನಲ್ಲಿ ಯಶಸ್ಸು ಸಿಗುವಂತಿದೆ. ಯುಪಿಎ ಸರ್ಕಾರ ಇದ್ದಾಗ ಈತನಿಗೆ ಪೌರತ್ವ ನೀಡುವುದನ್ನು ಖಂಡತುಂಡವಾಗಿ ಪ್ರತಿಭಟಿಸಿದ್ದ ಬಿಜೆಪಿ, ಈಗ ಉಲ್ಟಾ ಹೊಡೆದಿದೆ. ಶೀಘ್ರವೇ ಅಡ್ನಾನ್ ಸಾಮಿ ಭಾರತೀಯ ಪೌರನಾಗುವ ಸೂಚನೆಯನ್ನು ಕೇಂದ್ರ ಸರ್ಕಾರ ನೀಡಿದೆ. ರಾಜಕೀಯದವರ ನಡೆಗಳು ಏನೇ ಇರಲಿ, ಈತನ ಹಾಡುಗಳನ್ನು, ಸಂಗೀತವನ್ನು ಮೆಚ್ಚಿಕೊಂಡಿರುವ ಲಕ್ಷಾಂತರ ಭಾರತೀಯ ಅಭಿಮಾನಿಗಳಿಗಂತೂ ಇದು ಸಂತಸದ ಸುದ್ದಿಯೇ.

ಭಾರತದಲ್ಲಿ ತನ್ನ ವೀಸಾ ಅವಧಿಯನ್ನು ವಿಸ್ತರಿಸಬೇಕೆಂದು ಈತ ಗೃಹ ಸಚಿವಾಲಯಕ್ಕೆ ಮೇ 26ರಂದು ಅರ್ಜಿ ಸಲ್ಲಿಸಿದ್ದ. ಅರ್ಜಿಯ ಬಗ್ಗೆ ಸರ್ಕಾರ ಅಷ್ಟೇನೂ ಉತ್ಸುಕತೆ ಪ್ರಕಟಿಸಿರಲಿಲ್ಲ. ಆದರೆ ಅದೇನಾಯಿತೋ, ಈತನನ್ನು ಪಾಕಿಸ್ತಾನಕ್ಕೆ ವಾಪಸ್ ಕಳುಹಿಸುವ ನಿರ್ಧಾರ ಬಿದ್ದುಹೋಯಿತು. ವಿದೇಶೀಯರ ಕಾಯ್ದೆಯ ಸೆಕ್ಷನ್ 3ರಿಂದ ವಿನಾಯ್ತಿ ಪ್ರಕಟಿಸಲಾಯಿತು.

ಅಡ್ನಾನ್ ಸಾಮಿ ಭಾರತಕ್ಕೆ ಬಂದದ್ದು 2001 ಮಾರ್ಚ್ 13ರಂದು– ಅದೂ ಒಂದು ವರ್ಷದ ವಿಸಿಟಿಂಗ್ ವೀಸಾದ ಮೇಲೆ. ಅದಾಗಲೇ ಆತ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಾಯಕನಾಗಿ, ಕಂಪೋಸರ್ ಆಗಿ ಗುರುತಿಸಿಕೊಂಡಿದ್ದ. ಆದರೆ ಮುಂಬೈ ಆತನನ್ನು ಗಟ್ಟಿಯಾಗಿ ಅಪ್ಪಿಕೊಂಡಿತು. ಮ್ಯೂಸಿಕ್ ಆಲ್ಬಂ ತಂದ. ಹಿಂದಿ ಸಿನಿಮಾಗಳಲ್ಲಿ ಹಾಡತೊಡಗಿದ. ಹೀಗಾಗಿ ಕಾಲದಿಂದ ಕಾಲಕ್ಕೆ ಆತನ ಭಾರತದ ವೀಸಾ ಅವಧಿ ವಿಸ್ತರಣೆ ಆಗುತ್ತಲೇ ಇತ್ತು. ಕೊನೆಯ ವಿಸ್ತರಣೆ ಈ ವರ್ಷದ ಮೇ 26ಕ್ಕೆ ಕೊನೆಗೊಂಡಿತ್ತು. 2010ರಲ್ಲಿ ಈತ ಪಾಕಿಸ್ತಾನದಲ್ಲಿ ಪಡೆದುಕೊಂಡಿದ್ದ ಆ ದೇಶದ ಪಾಸ್‌ಪೋರ್ಟ್ ಅವಧಿ ಕೂಡಾ ಈ ಮೇನಲ್ಲಿ ಮುಗಿದದ್ದು ಕಾಕತಾಳೀಯ. ಪಾಕಿಸ್ತಾನ ಈತನಿಗೆ ಮತ್ತೆ ಪಾಸ್‌ಪೋರ್ಟ್ ನೀಡುವ ಸಾಧ್ಯತೆ ಇಲ್ಲ ಎಂದು ಅಲ್ಲಿನ ಅಧಿಕಾರಿಗಳು ಇತ್ತೀಚೆಗೆ ಸ್ಪಷ್ಟಪಡಿಸಿದ್ದಾರೆ. ಸದ್ಯಕ್ಕೆ ಈತನ ಬಳಿ ಇರುವುದು ಕೆನಡಾದ ಪೌರತ್ವ. ಆದರೆ ಭಾರತದ ನಿಯಮಗಳ ಪ್ರಕಾರ ದ್ವಿಪೌರತ್ವ ಹೊಂದುವಂತಿಲ್ಲ. ಭಾರತದ ಪೌರತ್ವ ಬೇಕಿದ್ದರೆ ಕೆನಡಾದ ಪೌರತ್ವ ಬಿಡಬೇಕು. ಈತನೀಗ ಅದಕ್ಕೂ ಸಿದ್ಧ. ಭಾರತದಲ್ಲಿನ ವಾಸ 11 ವರ್ಷಗಳನ್ನು ದಾಟಿರುವುದರಿಂದ ಭಾರತದ ಪೌರತ್ವ ಕೊಡಲು ಅಡ್ಡಿಯೇನಿಲ್ಲ.



ಲಾಹೋರ್‌ನಲ್ಲಿ, ಶ್ರೀಮಂತ ಕುಟುಂಬದಲ್ಲಿ ಜನಿಸಿದಾತ ಅಡ್ನಾನ್ ಸಾಮಿ. ಗಾಯಕ, ಚಿತ್ರ ಕಲಾವಿದ, ನಟ, ಸಂಗೀತಗಾರ, ಕಂಪೋಸರ್– ಹೀಗೆ ಈತನದ್ದು ಬಹುಮುಖಿ ವ್ಯಕ್ತಿತ್ವ. ಪಾಕಿಸ್ತಾನದಲ್ಲಿ ನೆಲೆಸಿದ ಫಸ್ತೂನ್ ತಂದೆ, ಜಮ್ಮು ಮೂಲದ ಕಾಶ್ಮೀರಿ ತಾಯಿ. ತಂದೆ ಪಾಕಿಸ್ತಾನ ವಾಯುಪಡೆಯ ಅಧಿಕಾರಿ. ಕುಟುಂಬದ ಹೆಚ್ಚಿನವರು ಇರುವುದು ಅಫಘಾನಿಸ್ತಾನದಲ್ಲಿ. ಹೀಗೆ ಸಾಮಿಯದ್ದು ಅಂತರರಾಷ್ಟ್ರೀಯ ವ್ಯಕ್ತಿತ್ವ.

ಲಂಡನ್ನಿನಲ್ಲಿ ಬಾಲ್ಯ ಕಳೆದದ್ದು ಸಾಮಿಗೆ ವರವಾಯಿತು. ಐದರ ಹರೆಯದಲ್ಲೇ ಪಿಯಾನೊ ನುಡಿಸತೊಡಗಿದ. 9ರ ಹರೆಯದಲ್ಲಿ ಮೊದಲ ಮ್ಯೂಸಿಕ್ ಕಂಪೊಸಿಷನ್ ಮಾಡಿದ. ಪಂಡಿತ್ ಶಿವಕುಮಾರ್ ಶರ್ಮಾ ಸಹಿತ ಹಲವು ದಿಗ್ಗಜರ ಬಳಿ ಸಂಗೀತ ಕಲಿತ. ಒಂದೊಂದಾಗಿ 35 ವಾದ್ಯಗಳನ್ನು ನುಡಿಸುವುದು ಕಲಿತ. ಲಂಡನ್ನಿನಲ್ಲಿ ನಡೆದ 'ಆರ್.ಡಿ.ಬರ್ಮನ್ ಕನ್ಸರ್ಟ್'ನಲ್ಲಿ ಗಾಯಕಿ ಆಶಾ ಭೋಸ್ಲೆ ಈತನ ಪ್ರತಿಭೆಯನ್ನು ಗುರುತಿಸಿದರು. ಎಳೆಯ ಪ್ರಾಯದಲ್ಲೇ 'ನೌಶಾದ್ ಸಂಗೀತ ಪ್ರಶಸ್ತಿ'ಯೂ ಒಲಿದು ಬಂತು. ಒಂದು ಕಾಲದಲ್ಲಿ ಲತಾ ಮಂಗೇಶ್ಕರ್, ಖಯ್ಯಾಮ್ ಮುಂತಾದವರು ಗೆದ್ದುಕೊಂಡಿದ್ದ ಆ ಪ್ರಶಸ್ತಿ, ಸಾಮಿಯ ಪ್ರತಿಷ್ಠೆಯನ್ನು ಇನ್ನಷ್ಟು ಹೆಚ್ಚಿಸಿತು.

ಲಂಡನ್ ವಿವಿಯ ಪತ್ರಿಕೋದ್ಯಮ ಮತ್ತು ರಾಜ್ಯಶಾಸ್ತ್ರ ಪದವೀಧರ ಸಾಮಿ, ಈಗ ಭಾರತೀಯ ಶಾಸ್ತ್ರೀಯ, ಅರೆಶಾಸ್ತ್ರೀಯ, ಜಾಜ್, ರಾಕ್, ಪಾಪ್, ಫ್ಯೂಶನ್, ಫಿಲಂ– ಎಲ್ಲ ತರಹದ ಗಾಯನದಲ್ಲೂ ಸುಪ್ರಸಿದ್ಧ. ಈತನ ಆರಂಭದ ಮ್ಯೂಸಿಕ್ ಆಲ್ಬಂನ 'ಮುಜೇ ಭಿ ಲಿಫ್ಟ್ ಕರಾ ದೆ' ಹಾಡು ಈತನನ್ನು ಭಾರತದಲ್ಲಿ ಮನೆ ಮಾತಾಗಿಸಿತು. ಈತನ ಹಾಡುಗಳಿಗೆ ಕುಣಿದ ನಟ ಗೋವಿಂದ 'ಸೂಪರ್ ಸ್ಟಾರ್' ಪಟ್ಟಕ್ಕೇರಿದ. 'ಜಗತ್ತಿನ ಅತ್ಯಂತ ವೇಗದ ಕೀಬೋರ್ಡ್ ಪ್ಲೇಯರ್' ಎಂಬ ಪ್ರಶಸ್ತಿಯೂ ಹರೆಯದಲ್ಲೇ ಈತನನ್ನು ಅರಸಿಕೊಂಡು ಬಂತು.

ಖುಷಿ ಮತ್ತು ದುಃಖವಾದಾಗ ಹೊಟ್ಟೆ ತುಂಬ ತಿನ್ನುವುದು ಈತನ ಹವ್ಯಾಸವಾಗಿತ್ತಂತೆ. ಹೀಗಾಗಿಯೇ 10 ವರ್ಷಗಳ ಹಿಂದೆ ಅಡ್ನಾನ್ ಸಾಮಿಯ ದೇಹತೂಕ 206 ಕೆಜಿ ಗೆ ಏರಿತ್ತು. ಆರೋಗ್ಯ ಕೈಕೊಟ್ಟು ಕೊನೆಗೆ ನಡೆಯಲೂ ಆಗದೆ ಹಾಸಿಗೆಯಲ್ಲಿ ಬಿದ್ದುಕೊಂಡಿದ್ದ ಈತನನ್ನು ಅಪ್ಪ ಗದರಿಸಿ, ಹೂಸ್ಟನ್‌ಗೆ ರಜೆಯ ಮೇಲೆ ಕಳಿಸಿದ. ಮೂರು ತಿಂಗಳ ಕಾಲ ಕೆಲಸಕಾರ್ಯಗಳನ್ನೆಲ್ಲ ಬಿಟ್ಟು ಹೂಸ್ಟನ್‌ನಲ್ಲಿದ್ದು ತನ್ನ ದೇಹತೂಕವನ್ನು 100 ಕೆಜಿಗೆ ಇಳಿಸಿಕೊಂಡ!

ವೈಯಕ್ತಿಕ ಜೀವನದ ದುಃಖ ದುಮ್ಮಾನಗಳೂ ಈತನನ್ನು ಹಣ್ಣು ಮಾಡಿದವು. ಎರಡು ಮದುವೆಗಳ ಬಂಧನವನ್ನು ಕಳಚಿಕೊಂಡಿದ್ದ ಪಾಕಿಸ್ತಾನದ ನಟಿ ಜೇಬಾ ಭಕ್ತಿಯಾರ್ ಜತೆಗೆ ಈತನ ಮೊದಲ ಮದುವೆ ನಡೆದದ್ದು 1993ರಲ್ಲಿ. ಪಾಕಿಸ್ತಾನದ ಟೀವಿ, ಸಿನಿಮಾಗಳಲ್ಲಿ ಮಿಂಚಿದ್ದ ಜೇಬಾ, ಬಾಲಿವುಡ್‌ಗೆ ಬಂದು 'ಹೆನ್ನಾ' ಸಿನಿಮಾದಲ್ಲಿ ನಟಿಸಿದ್ದಳು. ಈಕೆಗಾಗಿ ಸರ್‌ಗಮ್ ಎಂಬ ಆಲ್ಬಂ ತಂದ ಸಾಮಿ. ಆದರೆ ನಾಲ್ಕು ವರ್ಷಗಳ ಬಳಿಕ ಮದುವೆ ಮುರಿದುಬಿತ್ತು. 2001ರಲ್ಲಿ ದುಬೈಯ ಅರಬ್ ಮಹಿಳೆ ಸಬಾ (ಆಕೆಗೂ ಅದು ಎರಡನೇ ಮದುವೆ)ಳನ್ನು ಮದುವೆಯಾದ. ಅದೂ ಡೈವೋರ್ಸ್‌ನಲ್ಲಿ ಕೊನೆಗೊಂಡಿತು. 2010ರಲ್ಲಿ ರೋಯಾಳನ್ನು ಮದುವೆಯಾದ. ಈಕೆ ಆಫ್ಘಾನ್ ಮೂಲದ ಜರ್ಮನಿ ಹುಡುಗಿ. ಸದ್ಯಕ್ಕೆ ದಂಪತಿ ಸುಖವಾಗಿದ್ದಾರೆ. ಮೊದಲ ಪತ್ನಿಯ ಮಗ ಆಜಾನ್ ಸಾಮಿ ಖಾನ್, ಈಗಾಗಲೆ ಹಾಡಲು ಶುರು ಮಾಡಿದ್ದಾನೆ.

ಇತ್ತೀಚೆಗೆ ಬಿಡುಗಡೆಯಾಗಿರುವ ಸಲ್ಮಾನ್ ಖಾನ್ ನಾಯಕನಾಗಿರುವ 'ಭಜರಂಗಿ ಭಾಯ್‌ಜಾನ್' ಎಂಬ ಸೂಪರ್‌ಹಿಟ್ ಚಿತ್ರದಲ್ಲಿ ಅಡ್ನಾನ್ ಸಾಮಿ ಹಾಡಿರುವ 'ಭರ್‌ದೊ ಜೋಲಿ ಮೇರಿ' ಸಾಕಷ್ಟು ಮೆಚ್ಚುಗೆ ಗಳಿಸಿದೆ. ಅಭಿಮಾನಿಗಳ ಹೊಗಳಿಕೆಯಿಂದ ಉಬ್ಬಿರುವ ಈತ 'ಗಾಯಕನಾಗದಿದ್ದಿದ್ದರೆ ನಾನು ಬಹುಶಃ ಲಂಡನ್ನಿನಲ್ಲಿ ವಕೀಲನಾಗಿ ಸೆಟ್ಲ್ ಆಗುತ್ತಿದ್ದೆನೋ ಏನೋ..' ಎಂದು ಇತ್ತೀಚೆಗೆ ಟ್ವೀಟ್ ಮಾಡಿದ್ದಾನೆ. ಸದ್ಯಕ್ಕಂತೂ ಈತ ಪೌರತ್ವ ಪಡೆದು ಭಾರತದಲ್ಲೇ ಸೆಟ್ಲ್ ಆಗುವ ಸಂಭವ ಹೆಚ್ಚಿದೆ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65